ಶ್ರೀ ಮುರುಗೇಶ್ ಆರ್. ನಿರಾಣಿ (ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :–

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಬೆಂಗಳೂರು ಉತ್ತರ ತಾಲ್ಲೂಕು, ಪೀಣ್ಯ ಕೈಗಾರಿಕಾ ಪ್ರದೇಶವನ್ನು ನಿರ್ಮಿಸಿ, ಕೈಗಾರಿಕಾ ಘಟಕಗಳಿಗೆ ಜಮೀನುಗಳನ್ನು ಹಂಚಿಕೆ ಮಾಡಿರುತ್ತದೆ. ಈ ಕೈಗಾರಿಕಾ ಪ್ರದೇಶದಲ್ಲಿರುವ ಪಾದಚಾರಿ ಮಾರ್ಗಗಳನ್ನು ಯಾವುದೇ ಕೈಗಾರಿಕಾ ಘಟಕಗಳಿಗೆ ಹಂಚಿಕೆ ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ತುಂಗಭದ್ರ ಅಚ್ಚುಕಟ್ಟು ಪ್ರದೇಶ

270 (654) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು):–(ಮಾನ್ಯ ಜಲಸಂಪನ್ಮೂಲ ಸಚಿವರು) ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕಳೆದ ಎರಡು ವರ್ಷಗಳಲ್ಲಿ ತುಂಗಭದ್ರ ಅಚ್ಚುಕಟ್ಟು ಪ್ರದೇಶದ ಕಾಡಾಕ್ಕೆ ಇಂಜಿನೀಯರಿಂಗ್, ಕೃಷಿ, ಎಡದಂಡೆ ನಾಲೆ ಹಾಗೂ ಬಲದಂಡೆ ನಾಲೆಗಳಿಗೆ ಮಂಜೂರಾದ ಅನುದಾನವೆಷ್ಟು; (ವರ್ಷಾವಾರು ವಿವರಗಳನ್ನು ನೀಡುವುದು)

ಆ) ಈ ಅನುದಾನದಲ್ಲಿ ವಿವಿಧ ಕಾಮಗಾರಿಗಳಿಗೆ ಹಾಗೂ ಕೃಷಿ ಚಟುವಟಿಕೆಗೆ ಬಿಡುಗಡೆ ಮಾಡಿದ ಮೊತ್ತವೆಷ್ಟು;

ಇ) ಬಿಡುಗಡೆಯಾದ ಮೊತ್ತದಲ್ಲಿ ಸಿಂಧನೂರು ತಾಲ್ಲೂಕಿಗೆ ಬಿಡುಗಡೆ ಮಾಡಿದ ಮೊತ್ತವೆಷ್ಟು;

ಈ) ಈ ಮೊತ್ತವನ್ನು ಬಿಡುಗಡೆ ಮಾಡುವಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಉ) ಬಂದಿದ್ದಲ್ಲಿ, ಈ ತಾರತಮ್ಯವನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :-

ಅ) ಮಂಜೂರಾದ ಹಣದ ವಿವರ ಈ ಕೆಳಕಂಡಂತೆ ಇದೆ.

(ರೂ.ಲಕ್ಷಗಳಲ್ಲಿ)

	ಚಟುವಟಿಕೆ	2008–09	2009–10
ಕೃಷಿ ವಿಭಾಗ	ಎಡದಂಡೆ ನಾಲೆ	159.48	308.40
	ಬಲದಂಡೆನಾಲೆ	274.05	201.86
	ಒಟ್ಟು	**433.53**	**510.26**
ಇಂಜಿನಿಯರಿಂಗ್	ಎಡದಂಡೆ ನಾಲೆ	205.18	293.01
ವಿಭಾಗ	ಬಲದಂಡೆ ನಾಲೆ	28.74	99.56
	ಒಟ್ಟು	**233.92**	**392.57**

ಆ) ಬಿಡುಗಡೆಯಾದ ಹಣದ ವಿವರ ಈ ಕೆಳಕಂಡಂತೆ ಇದೆ.

(ರೂ.ಲಕ್ಷಗಳಲ್ಲಿ)

	ಚಟುವಟಿಕೆ	2008–09	2009–10
ಕೃಷಿ ವಿಭಾಗ	ಎಡದಂಡೆ ನಾಲೆ	159.48	310.40
	ಬಲದಂಡೆನಾಲೆ	274.05	203.85
	ಒಟ್ಟು	**433.53**	**514.25**
ಇಂಜಿನಿಯರಿಂಗ್	ಎಡದಂಡೆ ನಾಲೆ	205.18	293.01
ವಿಭಾಗ	ಬಲದಂಡೆ ನಾಲೆ	28.74	99.56
	ಒಟ್ಟು	**233.92**	**392.57**
	ಒಟ್ಟು	**667.45**	**902.83**

ಇ) ಮೇಲ್ಕಂಡ ಅನುದಾನದಲ್ಲಿ ಸಿಂಧನೂರ ತಾಲ್ಲೂಕಿಗೆ ಬಿಡುಗಡೆಯಾದ ಹಣದ ವಿವರ ಈ ಕೆಳಕಂಡಂತೆ ಇದೆ.

(ರೂ.ಲಕ್ಷಗಳಲ್ಲಿ)

ಚಟುವಟಿಕೆ	2008–09	2009–10
ಕೃಷಿ ವಿಭಾಗ	22.40	76.60
ಇಂಜಿನಿಯರಿಂಗ್ ವಿಭಾಗ	54.62	93.90
ಒಟ್ಟು	**77.02**	**170.50**

ಈ) ಯಾವುದೇ ತಾರತಮ್ಯವಾಗಿರುವುದಿಲ್ಲ.

ಉ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸಿಂಧನೂರಿನಲ್ಲಿ ಮಿನಿ ವಿಧಾನ ಸೌಧ

271 (656) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು):–(ಮಾನ್ಯ ಕಂದಾಯ ಸಚಿವರು) ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಸಿಂಧನೂರು ತಾಲ್ಲೂಕಿನಲ್ಲಿ ಮಿನಿ ವಿಧಾನಸೌಧ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಆ) ಬಂದಿದ್ದಲ್ಲಿ, ಸಿಂಧನೂರಿನಲ್ಲಿ ಮಿನಿ ವಿಧಾನಸೌಧ ನಿರ್ಮಿಸಲ ಸರ್ಕಾರಕ್ಕಿರುವ ತೊಂದರೆಗಳೇನು ಹಾಗೂ ಮಿನಿ ವಿಧಾನಸೌಧ ನಿರ್ಮಿಸಲು ಸ್ಥಳ ಗುರುತಿಸಲಾಗಿದೆಯೆ:

ಇ) ಗುರುತಿಸಿದ್ದಲ್ಲಿ, ನಗರದ ಯಾವ ಭಾಗದಲ್ಲಿ ಮತ್ತು ಎಷ್ಟು ವಿಸ್ತೀರ್ಣದ ಸ್ಥಳವನ್ನು ಗುರುತಿಸಲಾಗಿದೆ;

ಈ) ಮಿನಿ ವಿಧಾನಸೌಧ ನಿರ್ಮಿಸಲು ಸರ್ಕಾರ ಅನುದಾನವನ್ನೇನಾದರು ನಿಗಧಿಪಡಿಸಿದೆಯೇ;

ಉ) ಹಾಗಿದ್ದಲ್ಲಿ, ಮಿನಿ ವಿಧಾನಸೌಧದ ಕಟ್ಟಡದ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು;

ಊ) ಮಿನಿ ವಿಧಾನಸೌಧದ ಕಟ್ಟಡದ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರ ಕಾಲಮಿತಿಯನ್ನು ನಿಗಧಿಪಡಿಸಿರುವುದೇ, ಎಂದು ಪೂರ್ಣಗೊಳಿಸಲಾಗುವುದು?